ಪ್ರಕಟಣೆಗಳು

ಅಧ್ಯಕ್ಷರು.—೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬಗ್ಗೆ ವಿಧಾನಸಭೆಯಲ್ಲಿ ಮಂಡಿಸಲು ಭಾರತ ಸಂವಿಧಾನದ ೨೦೫ (೧)ನೇ ಅನುಚ್ಛೇದದ ಮೇರೆಗೆ ಸನ್ಮಾನ್ಯ ರಾಜ್ಯಪಾಲರು ಶಿಫಾರಸ್ಸನ್ನು ಮಾಡಿದ್ದಾರೆಂದು ಸದನಕ್ಕೆ ತಿಳಿಯುಬಯಸುತ್ತೇನೆ.

೨) ೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಪರ್ಯಾಲೋಚಿಸಿ ಅಂಗೀಕರಿಸಲು ಸನ್ಮಾನ್ಯ ರಾಜ್ಯಪಾಲರು ಶಿಫಾರಸ್ಸು ಮಾಡಿದ್ದಾರೆಂದು ಸದನದ ಗಮನಕ್ಕೆ ತರಬಯಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಮಂಡನೆ

ಅಧ್ಯಕ್ಷರು.—ಈಗ ಭಾರತ ಸಂವಿಧಾನದ ೨೦೫ (೧)ನೇ ಅನುಚ್ಛೇದದ ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬಗ್ಗೆ ಪ್ರಸ್ತಾವಗಳನ್ನು ಸಭೆಗೆ ಒಪ್ಪಿಸುವುದು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ೨೦೫ (೧)ನೇ ಅನುಚ್ಛೇದದ ಮೇರೆಗೆ ೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬಗ್ಗೆ ಪ್ರಸ್ತಾವಗಳನ್ನು ಮಾನ್ಯ ಮಂಖ್ಯಮಂತ್ರಿಗಳ ಪರವಾಗಿ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಹಕ್ಕುಚ್ಯುತಿ ಪ್ರಸ್ತಾವ

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆಯವರು ಸದನದಲ್ಲಿ ಹಕ್ಕುಚ್ಯುತಿ ಯೊಗುವಂತೆ ವರ್ತಿಸಿರುವುದು

ಶ್ರೀ ಎಂ. ಎಸ್. ಕೃಷ್ಣನ್.—ನಿಯಮ ೧೯೦ರ ಕೆಳಗೆ ನಾನು ಒಂದು ಪ್ರಿವಿಲೇಜು ಮೋಷನ್ ಕೊಟ್ಟಿದ್ದೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಸಹ ಒಂದು ಪ್ರಿವಿಲೇಜ್ ಮೋಷನನ್ನು ತಪ್ಪಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ನಾನು ಸಹ ಒಂದು ಪ್ರಿವಿಲೇಜ್ ಮೋಷನನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಮೂರು ಜನರೂ ಒಟ್ಟಿಗೆ ಎದ್ದು ನಿಂತಿದ್ದೀರಿ.

ಶ್ರೀ ರಾಜವರ್ಧನ್.—ನಾನು ಕೊಟ್ಟಿರುವುದನ್ನು ಮೊದಲು ತೆಗೆದುಕೊಳ್ಳಿ.

I will now read the notice given by the hon'ble Govt. Chief whip.

> "Question of breach of privilege against Sri Mallikarjuna Kharge hon'ble member of the Legislative Assembly under rule 190 of Rules of Procedure and Conduct of Business of Karnataka Legislative Assembly."...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಸರಿಯಲ್ಲ. ನಾನು ಮೊದಲು ನೋಟೀಸ್ ಕೊಟ್ಟಿದ್ದೇನೆ, ಆದ್ದರಿಂದ ನನ್ನದನ್ನು ಮೊದಲು ತೆಗೆದುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮಗೆ ಮೊನ್ನೆಯೇ ಕೊಟ್ಟಿದ್ದೇನೆ.

ಅಧ್ಯಕ್ಷರು.—ಆಯಿತು ನಿಮ್ಮದನ್ನೇ ಮೊದಲು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನೀವು ಕೊಟ್ಟ ಪ್ರಿವಿಲೇಜ್ ನೋಟೀಸ್ ಇದೆ. ಅದನ್ನೂ ತೆಗೆದುಕೊಳ್ಳುತ್ತೇನೆ, ಅವರದ್ದೂ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಪ್ರಿವಿಲೇಜ್ ನೋಟೀಸ್ ಅವರೂ ಕೊಟ್ಟಿದ್ದಾರೆ ಇವರೂ ಕೊಟ್ಟಿದ್ದಾರೆ. ನಾನೂ ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಅವರು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದಾರೆ, ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು —ಸ್ವಲ್ಪ ತಡೆಯಿರಿ ಏಕೆ ಇಷ್ಟು ಅವಸರ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಾವು ಹಿನೇ ತಾರೀಖು ಕೊಟ್ಟಿದ್ದೇವೆ. ಅಧ್ಯಕ್ಷರೇ, ನೀವು ಪಕ್ಷಪಾತ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ. ಮಲ್ಲಪ್ಪ.—ಮೊದಲು ಅವರಿಗೆ ಓದಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು.—ಆಯಿತು ಆಯಿತು, ಈಗ ನಾನು ಓದಿ ಹೇಳುತ್ತೇನೆ, ಸ್ವಲ್ಪ ಸಮಾಧಾನ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಾನು ಅವರ ಪ್ರಿವಿಲೇಜ್ ಮೋಷನ್‌ನನ್ನು ತೆಗೆದುಕೊಳ್ಳಬೇಡಿ ಎಂದು ಹೇಳುವುದಿಲ್ಲ. ಮೊದಲು ಇದನ್ನು ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ತಡೆಯಿರಿ, ಏಕೆ ಇಷ್ಟು ಅವಸರ ಮಾಡುತ್ತೀರಿ, ಈರೀತಿ ಗದ್ದಲ ಮಾಡಿದರೆ ಹೇಗೆ ? ನಿಮ್ಮದೂ ತೆಗೆದುಕೊಳ್ಳುತ್ತೇನೆ, ಅವರದೂ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ತಡೆಯಿರಿ ಅವರು ಕೊಟ್ಟಿರುವುದನ್ನು ಓದಬೇಕೋ ಬೇಡವೊ,

ಶ್ರೀ ಆರ್. ವೆಂಕಟರಾಮಯ್ಯ.—ನಾನು ೪ನೇ ತಾರೀಖು ಕೊಟ್ಟಿದ್ದೇನೆ. ನಮ್ಮದೂ ಆಗಲಿ, ಅವರದೂ ಆಗಲಿ. ಬೇಡ ಎಂದು ಹೇಳುವುದಿಲ್ಲ. ನಾನು ೪ನೇ ತಾರೀಖು ಕೊಟ್ಟಿದ್ದೇನೆ. ಅದನ್ನು ಮೊದಲು ತೆಗೆದುಕೊಳ್ಳಿ.

ಅಧ್ಯಕ್ಷರು.—ಪ್ರಿವಿಲೇಜ್ ಅಷ್ಟೇ ಅಲ್ಲ ಅವರು ಕೊಟ್ಟಿರುವುದನ್ನು ನಾನು ಸ್ವಲ್ಪ ಓದಿ ಹೇಳಿಬಿಡುತ್ತೇನೆ, ಕೇಳಿಕೊಳ್ಳಿ, The question of breach of privilege against Sri Mallikarjun Kharge and other hon. Members...

(INTERRUPTIONS)

ಅಧ್ಯಕ್ಷರು —ಸ್ವಲ್ಪ ಕೇಳಿ. ಬರೀ ಪ್ರಿವಿಲೇಜ್ ನೋಟೀಸ್ ಅಲ್ಲ ಅದು, ಅವರು ಏನು ಕೊಟ್ಟಿದ್ದಾರೆ ಅದನ್ನು ಓದುತ್ತೇನೆ. ಅವರು ಬರೀ ಪ್ರಿವಿಲೇಜ್ ನೋಟೀಸ್ ಕೊಟ್ಟಿಲ್ಲ. ಸಸ್ಪೆಂಡ್ ಮಾಡುವುದಕ್ಕೆ ಕೊಟ್ಟಿದ್ದಾರೆ.....

(ಗೊಂದಲ)

ಅಧ್ಯಕ್ಷರು.—ಕೋಳಿವಾಡ್‌ರವರೆ ಸ್ವಲ್ಪ ಕೇಳಿ, ಓದಿ ಹೇಳುತ್ತೇನೆ. ಅವರು ಬರೀ ಪ್ರಿವಿಲೇಜ್ ನೋಟೀಸ್ ಅಷ್ಟೇ ಕೊಟ್ಟಿಲ್ಲ ಅದರಲ್ಲಿ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನೇನೂ ಹೆದರುವುದಿಲ್ಲ. I am ready to face whatever punishment is given. I am ready.....ಫಸ್ಟ್ ಕಂ ಫಸ್ಟ್. ಈಗ ಮೊದಲು ಇದನ್ನು ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಖರ್ಗೆಯವರೆ, ಈ ರೀತಿ ಡಿಸ್ಕಷನ್‌ಗೆ ಅವಕಾಶ ಕೊಡುವುದಿಲ್ಲ. ನಾನು ಓದಿ ಹೇಳುತ್ತೇನೆ. ನಿಮ್ಮದನ್ನೂ ತೆಗೆದುಕೊಳ್ಳುತ್ತೇನೆ. ಅವರದನ್ನೂ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನಾನು ಒಮ್ಮೆಗೆ ಏನೂ ಆಕ್ಷನ್ ತೆಗೆದುಕೊಳ್ಳುವುದಿಲ್ಲ. ನೋಡಿ, ಅವರು ಏನು ಕೊಟ್ಟಿದ್ದಾರೆ ಎನ್ನುವುದನ್ನು ಸದನದ ಗಮನಕ್ಕೆ ತರುವಂಥಾದ್ದು ನನ್ನ ಕರ್ತವ್ಯ. ಆದುದರಿಂದ ಸದನದ ಗಮನಕ್ಕೆ ತರುತ್ತಾ ಇದ್ದೇನೆ. ಈಗ ನಾನು ಏನೂ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. I will just bring it to the notice of this August House.....

(ಗೊಂದಲ)

ಅಧ್ಯಕ್ಷರು.—ನಿಮ್ಮದು ಬೇರೆ ಇದೆ. ಅವರದು ಪ್ರಶ್ನೆ ಬೇರೆ ಇದೆ. ಅವರದು ಬರೀ ಪ್ರಿವಿಲೇಜ್ ಅಷ್ಟೇ ಅಲ್ಲ ಅದರಲ್ಲಿ ಏನು ಹೇಳುತ್ತಾರೆಂದರೆ.....

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ಕೇಳಿ ಇಲ್ಲಿ. ಧರ್ಮಸಿಂಗ್ ಅವರೇ, ನೀವು ಅವರನ್ನು ಕೈ ಮಾಡಿ ಕರೆಯುವುದು ಸರಿಯಿಲ್ಲ. This is not the way. ಅವರನ್ನು ಕೈಮಾಡಿ ಏಕೆ ಕರೆಯುತ್ತೀರಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಬೇಡ, ಕೇಳಿ ಇಲ್ಲಿ. ಅವರು ಏನು ಕೊಟ್ಟಿದ್ದಾರೆ ಅದು ನಿಮಗೆ ತಿಳಿಬೇಕೋ ಬೇಡವೋ, ಸದನಕ್ಕೆ ತಿಳಿಯಬೇಕೋ ಬೇಡವೋ. ಅವರು ಏನು ಕೊಟ್ಟಿದ್ದಾರೆಂದ್ದರೆ, "I therefore move....."

(ಗೊಂದಲ)

ಅಧ್ಯಕ್ಷರು.—ನೀವು ಕೊಟ್ಟಿರುವುದು..... ..

ಶ್ರೀ ಆರ್. ವೆಂಕಟರಾಮಯ್ಯ.—ನಾನು ನಾಲ್ಕನೇ ತಾರೀಖು ಕೊಟ್ಟಿದ್ದೇನೆ... .....

(ಗೊಂದಲ)

ಅಧ್ಯಕ್ಷರು.—ಈಗ ಸಭೆಯನ್ನು ೧೦ ನಿಮಿಷಗಳ ಕಾಲ ಮುಂದಕ್ಕೆ ಹಾಕಿದ್ದೇನೆ.

(ಸದನವು ೧೨-೪೬ಕ್ಕೆ ಮುಂದೂಡಲ್ಪಟ್ಟಿತು)

(ಸದನವು ೧-೪೫ ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದಂತಹ ಒಂದು ಘಟನೆ ಬಗ್ಗೆ ನಾನು ಹೇಳಬೇಕೆಂದರೆ, ನಿಜವಾಗಿಯೂ ಅದು ತಮ್ಮ ಮನಸ್ಸಿಗೆ ತುಂಬಾ ನೋವಾಗಿದೆ. ಆದರ

ಹಿನ್ನೆಲೆಯನ್ನು ನಾನಂ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಸಂದರ್ಭ, ಏತಕ್ಕೆ ಆಯಿತಾ ಅದೆಲ್ಲಾ ಈಗ ನಾವು ಒಂದಂ ಸೆಟಲ್‌ಮೆಂಟ್‌ಗೆ ಬಂದ ಮೇಲೆ ಹೇಳುವುದು ಬೇಡ. ಅದರಲ್ಲೂ ಕೂಡ ನಾನು ತಮ್ಮ ಜೊತೆಗೆ ೧೯೭೨ನೇ ಇಸವಿಯಿಂದಲೂ ಕೂಡ ಒಟ್ಟಿಗೆ ಕೆಲಸ ಮಾಡಿದ್ದೇವೆ. ನಿನ್ನೆ ಉದ್ವೇಗಕ್ಕೆ ಕಾರಣವೇನು ಎನ್ನುವುದು ಬೇಡ. ತಮಗೆ ಈ ಘಟನೆ ಬಗ್ಗೆ ನೋವಾಗಿರುವುದರಿಂದ ಅದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಮುಂದೆ ಈ ಸದನದಲ್ಲಿ ಆ ರೀತಿಯಾಗಿ ಯಾರೂ ಕೂಡ ನಡೆದುಕೊಳ್ಳತಕ್ಕಂಥ ವ್ಯವಸ್ಥೆಯಾಗಬಾರದೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಾವೇನು ಮಾಡಿದಿವಿ, ಬೇರೆಯವರಂ ಏನು ಮಾಡಿದರೂ ಅದೆಲ್ಲಾ ಈಗ ಬೇಡ. ಈ ವಿಷಯವನ್ನು ಇಲ್ಲಿಗೇ ಮುಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದಂತಹ ಘಟನೆ ಬಗ್ಗೆ ಮಾನ್ಯ ಸದಸ್ಯರು ವಿಷಾದವನ್ನು ವ್ಯಕ್ತಪಡಿಸಿರುವುದರಿಂದ ನಾನು ಕೊಟ್ಟಂತಹ ನೋಟೀಸ್‌ನ್ನು ಪ್ರೆಸ್ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾವು ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೇವೆ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾಳೆ ಖಂಡಿತವಾಗಿ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ತೆಗೆದುಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆಗಳು

೧) ಗದಗ ಬೆಟಗೇರಿ ನಗರದ ಕಲುಷಿತ ನೀರಿನಿಂದಾಗಿ ರೋಗಗಳು ಹರಡುತ್ತಿರುವುದರ ಕುರಿತು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಗದಗ ಬೆಟಗೇರಿ ನಗರಕ್ಕೆ ನೀರು ಸರಬರಾಜು ಮಾಡುವ ಕುರಿತು ತುಂಗಭದ್ರಾ ನೀರು ಪೂರೈಕೆಯ ಯೋಜನೆಯ ಕೆಲಸ ನಡೆದಿದ್ದು ಕೊಳವೆ ಬಾವಿಯಿಂದ ನೀರು ಪೂರೈಸುತ್ತಿದ್ದು ಅದು ಕಲುಷಿತವಾಗಿದ್ದು ಜನರಿಗೆ ಅದರಿಂದ ರೋಗಗಳು ಹರಡುತ್ತಿರುವ ಬಗ್ಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).—ತುಂಗಭದ್ರಾ ನದಿ ಮೂಲದ ಗದಗ-ಬೆಟಗೇರಿ ನೀರು ಸರಬರಾಜು ಯೋಜನೆಯ ೯೪೦ ಲಕ್ಷ ರೂ. ಅಂದಾಜಿಗೆ ಸರ್ಕಾರ ಜುಲೈ ೧೯೮೪ರಲ್ಲಿ ಆಡಳಿತಾನುಮೋದನೆ ನೀಡಿದೆ. ಈ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸಪ್ಟೆಂಬರ್ ೧೯೮೪ರಲ್ಲಿ ತಾತ್ಕಾಲಿಕ ಮಂಜೂರಾತಿ ನೀಡಿದೆ. ಈ ಯೋಜನೆಯ ಕೆಲಸಗಳು ಪ್ರಗತಿಯಲ್ಲಿದ್ದು, ೧೯೮೮ರ ಆಗಸ್ಟ್‌ಕೊನೆಗೆ ೧೯೩.೩೦ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಗದಗ-ಬೆಟಗೇರಿ ಜೋಡಿ ನಗರದ ನೀರು ಸರಬರಾಜು ನಿರ್ವಹಣಾ ಕಾರ್ಯವನ್ನು ನಗರಸಭೆಯವರೇ ನೋಡಿಕೊಳ್ಳುತ್ತಿದ್ದಾರೆ. ನಗರದಲ್ಲಿ ಈಗ ವಿದ್ಯುತ್ ಶಕ್ತಿ ಚಾಲಿತ ಪಂಪು ಗಳನ್ನು ಅಳವಡಿಸಿದ ಕೊಳವೆ ಬಾವಿಗಳು ಸಹ ಇರುತ್ತವೆ. ಸದರಿ ನಗರದಲ್ಲಿ ದಿನಂಪ್ರತಿ ತಲಾ ಒಂದಕ್ಕೆ ಸುಮಾರು ೩೫ ಲೀಟರು ನೀರನ್ನು ಸರಬರಾಜು ಮಾಡಲಾಗುತ್ತಿದೆ.

ದಿನಾಂಕ ೨೬-೯-೧೯೮೮ ರಂದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಕಾರ್ಯಾಲಯದಲ್ಲಿ ಸಭೆಯನ್ನು ಕರೆದು ಮುಖ್ಯ ಅಭಿಯಂತರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮತ್ತು ಜಂಟಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರೊಡನೆ ಗದಗ-ಬೆಟಗೇರಿ ನಗರದಲ್ಲಿ ಕೊಳವೆ ಬಾವಿಗಳಿಂದ ನೀರು ಪೂರೈಸುವ ಬಗ್ಗೆ ಮತ್ತು ಆ ನೀರು ಹೆಚ್ಚು ಕಲುಷಿತವಾಗಿದ್ದು, ಜನರಿಗೆ ಅದರಿಂದ ರೋಗ ರುಜಿನಗಳು ಹರಡುತ್ತಿರುವ ಬಗೆ ಚರ್ಚೆ ನಡೆಸಲಾಗಿದೆ. ಬೆಟಗೇರಿ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಕೊಳವೆ ಬಾವಿಗಳ ಸುತ್ತ ನಿಂತು ಕಲುಷಿತ ನೀರು ಕೊಳವೆ ಬಾವಿಗಳಿಗೆ ಸೇರುತ್ತಿದ್ದುದು ಕಂಡು ಬಂದಿರುತ್ತದೆ. ಆದ್ದರಿಂದ ಕೊಳವೆ ಬಾವಿಗಳಿಗೆ